ಆ) ಕರ್ನಾಟಕ ಪಲ್ಪ್‌ವುಡ್ ಸಂಸ್ಥೆಯಲ್ಲಿ ಸರ್ಕಾರದ ಪರವಾಗಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದವರು ಶೇಕಡ ೫೧ ರಷ್ಟು ಮತ್ತು ಹರಿಹರ ಪಾಲಿಫೈಬರ್ಸ್ ಪತಿಯಿಂದ ಗ್ರಾಸಿಂ ಕೈಗಾರಿಕೆ ನಿಗಮ ನಿಯಮಿತ ಇವರುಗಳ ಶೇಕಡ ೪೯ರಷ್ಟು ಷೇರು ಬಂಡವಾಳ ಒಟ್ಟುಗೂಡಿ ಸರ್ಕಾರಿ ಆದೇಶ ದನ್ವಯ ಸಂಸ್ಥೆ ಸ್ಥಾಪನೆಗೊಂಡಿರುತ್ತದೆ.

ಇ) ಗೇಣಿಯ ರೂಪವಾಗಿ ಸರ್ಕಾರಕ್ಕೆ ಬರುವಂತಹ ಶೇಕಡಾ 12½ ರಷ್ಟು ಅರಣ್ಯ ಉತ್ಪಾದನೆಯನ್ನು ಇಲಾಖೆಗೆ ಗೇಣಿ ಬಾಡಿಗೆಯಾಗಿ ಪಡೆದುಕೊಳ್ಳಲಾಗುವುದು ಉಳಿದ 87½ರಷ್ಟು ಅರಣ್ಯ ಉತ್ಪಾದನೆಯನ್ನು ಸಂಭಂದಪಟ್ಟ ಸರ್ಕಾರಿ ನಿಗಮವಾದ ಅರಣ್ಯ ಅಭಿವೃದ್ಧಿ ನಿಗಮ ಮತ್ತು ಗ್ರಾಸಿಂ ಇಂಡಸ್ಟ್ರೀಸ್ ನಿಗಮ ನಿಯಮಿತ ಇವರುಗಳಿಗೆ ಶೇರು ಬಂಡವಾಳದ ಅನುಸಾರ ವಿಂಗಡಿಸಲಾಗುತ್ತಿದೆ.

ಈ) ಹೌದು.

ಜೇಷ್ಠತಾ ಪಟ್ಟಿಯಲ್ಲಿ ಬಳ್ಳಾರಿ ಪದವಿಧರ ಸಹ ಶಿಕ್ಷಕರುಗಳ ಹೆಸರನ್ನು ಸೇರಿಸದೆ ಇರುವುದು

೧೪೯೧(೩೦೩೨) ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;—

ಅ) ೧-೬-೮೦ರಲ್ಲಿ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡ ಮಾಜಿ ಪುರಸಭಾ ಪ್ರೌಢಶಾಲೆ ಬಳ್ಳಾರಿ ಇಲ್ಲಿನ ಪದವೀಧರ ಸಹ ಶಿಕ್ಷಕರುಗಳ ಹೆಸರುಗಳನ್ನು ಇಲಾಖಾವತಿಯಿಂದ ಪ್ರಕಟವಾಗುತ್ತಿರುವ ಜೇಷ್ಠತಾ ಪಟ್ಟಿಯಲ್ಲಿ ಸೇರಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇವರುಗಳ ಹೆಸರುಗಳನ್ನು ಸೇರಿಸದಿರಲು ಕಾರಣಗಳೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಇತ್ತೀಚಿನ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಮಾರ್ಗ ಸೂಚಿಯಂತೆ ಇಲಾಖೆಯು ಪ್ರೌಢಶಾಲಾ ಸಹ ಶಿಕ್ಷಕರುಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ತಯಾರಿಸಲಾಗುತ್ತಿದ್ದು ಬಳ್ಳಾರಿ ಪುರಸಭಾ ಪ್ರೌಢಶಾಲೆಯ ಪದವೀಧರ ಶಿಕ್ಷಕರುಗಳ ಹೆಸರುಗಳನ್ನು ಜೇಷ್ಠತಾ ಪಟ್ಟಿಯಲ್ಲಿ ಸೇರಿಸಲು ಕ್ರಮವನ್ನು ಕೈಗೊಳ್ಳಲಾಗಂತ್ತಿದೆ.

ಆ) ಪ್ರಶ್ನೆಯು ಉದ್ಭವಿಸುವುದಿಲ್ಲ.

ಕೇಂದ್ರ ಸರ್ಕಾರವು ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಎಂದು ಘೋಷಿಸಿರುವ ಬಗ್ಗೆ

೧೪೯೨(೨೮೩೬) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಲೋಕೋಪಯೋಗಿ ಮತ್ತು ನಿರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕೇಂದ್ರ ಸರ್ಕಾರವು ಇತ್ತೀಚೆಗೆ ರಾಜ್ಯದಲ್ಲಿ ಎಷ್ಟು ಉದ್ದದ ರಾಷ್ಟ್ರೀಯ ಹೆದ್ದಾರಿಗಳನ್ನು ಮಂಜೂರು ಮಾಡಿದೆ?

ಆ) ಬೈ ಪಾಸ್‌ಗಳೂ ಸೇರಿದಂತೆ ಈ ರಾಷ್ಟ್ರೀಯ ಹೆದ್ದಾರಿಗಳ ಅಂದಾಜು ವೆಚ್ಚ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಈಚೆಗೆ ಕೇಂದ್ರ ಸರ್ಕಾರವು ರಾಜ್ಯದಲ್ಲಿ ಯಾವ ರಸ್ತೆಗಳನ್ನೂ ರಾಷ್ಟ್ರೀಯ ಹೆದ್ದಾರಿ ಎಂದು ಘೋಷಿಸಿಲ್ಲ.

ಆ) (ಅ) ನಲ್ಲಿ ಕೊಟ್ಟಿರುವ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷ್ಣ ಪೆಂಲ್ದಂಡೆ ಯೋಜನೆಯನ್ನು ಪೂರ್ಣ ಗೊಳಿಸುವ ಬಗ್ಗೆ

೧೪೯೩(೨೮೩೪) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಲೊಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—